ಕಂಡರೂ, ಯಾರೇ ಮಾಡಿದ್ದರೂ ಅವುಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಅವರ ಮನೆಯ ಎದುರು ಹೂಗುಚ್ಛದೊಂದಿಗಿನ 'ಶಾಭಾಸ್' ಫಲಕವನ್ನು ಅಂಟಿಸಿ ಫೋಟೊ ತೆಗೆಯುತ್ತೇನೆ. ಸಮಾಜಕ್ಕೆ ಏನನ್ನಾದರೂ ಮಾಡಬೇಕೆಂಬ ತುಸು ತುಡಿತ ಇರುವ ವಕೀಲ, ಕಲಾವಿದ, ಡಾಕ್ಟರ್, ಶಿಕ್ಷಕ, ಎಂಜಿನಿಯರ್, ತೆರಿಗೆತಜ್ಞರಲ್ಲಿ ಒಬ್ಬಿಬ್ಬರನ್ನು ಗುರುತಿಸಿ ಇಟ್ಟುಕೊಳ್ಳುತ್ತೇನೆ. ಮಳೆನೀರ ಸಂಗ್ರಹಣ ವ್ಯವಸ್ಥೆ, ಸೋಲಾರ್ ವಿದ್ಯುತ್‌ಗೆ ಹೂಡಿಕೆ ಮಾಡಿದವರ ಪಟ್ಟಿ ತಯಾರಿಸುತ್ತೇನೆ. ಎಲ್ಲಕ್ಕಿಂತ ಮೊದಲಿಗೆ ನಮ್ಮೂರಿನ ಸರಕಾರಿ ಇಲಾಖೆ (ರೆವಿನ್ಯೂ, ಆರೋಗ್ಯ, ಕೃಷಿ, ಸಂಚಾರ, ಮಾಲಿನ್ಯ ನಿಯಂತ್ರಣ ಇತ್ಯಾದಿ)ಗಳ ಇಂದಿನ ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ಹೆಸರು ಮತ್ತು ಫೋನ್ ನಂಬರನ್ನು ಸಂಗ್ರಹಿಸುತ್ತೇನೆ.

ನಾಲ್ಕಾರು ಗೆಳೆಯರ ಗುಂಪು ಕಟ್ಟಿಕೊಂಡು ಮಾಡುವುದಾದರೆ:

1. ಮುಂದಿನ ಆರು ತಿಂಗಳಲ್ಲಿ ಒಮ್ಮೆಯಾದರೂ ನಾವೆಲ್ಲ ಜೊತೆಯಾಗಿ ಹೋಗಿ ಸರಕಾರಿ ಆಸ್ಪತ್ರೆಯ ಸ್ಥಿತಿಗತಿ ಸಮೀಕ್ಷೆ ಮಾಡಿ ಬರುತ್ತೇವೆ.

2. ಶುದ್ಧನೀರಿನ ಘಟಕದ ನೀರಿನ ಗುಣಮಟ್ಟದ ತಪಾಸಣೆ ಮಾಡುತ್ತೇವೆ.

3. ಸರಕಾರಿ ಶಾಲೆಯ ಏಳನೇ ತರಗತಿಯ ವಿದ್ಯಾರ್ಥಿಯ ಕನ್ನಡ, ಗಣಿತ ಕಲಿಕೆಯ ಮತ್ತು ಬಿಸಿಯೂಟದ ಗುಣಮಟ್ಟವನ್ನು ನೋಡಿ ಬರುತ್ತೇವೆ.

4. ಸಮೀಪದ ಕೆರೆಯ ಆರೋಗ್ಯ ತಪಾಸಣೆ ಮಾಡುತ್ತೇವೆ. ವರ್ಷಕ್ಕೊಮ್ಮೆ ಈ ಕುರಿತು ಒಂದು 'ನಾಗರಿಕ ವರದಿ'ಯನ್ನು ತಯಾರಿಸಿ ಪ್ರಕಟಿಸುತ್ತೇವೆ. ಅಂಥ ಒಂದು ವಿಶಿಷ್ಟ ಚಿತ್ರವರದಿಯನ್ನು ನಮ್ಮೂರಿನ ಮಾಧ್ಯಮಗಳ ಸಮ್ಮುಖದಲ್ಲಿ ಜನಪ್ರತಿನಿಧಿಗೆ, ಅಧಿಕಾರಿಗೆ ನೀಡುತ್ತೇವೆ.

5. ದುಃಸ್ಥಿತಿಯಲ್ಲಿರುವ ಬಸ್ ನಿಲ್ದಾಣ/ ತಂಗುದಾಣ, ಸಾರ್ವಜನಿಕ ಶೌಚಾಲಯ, ಬಯಲು ರಂಗಮಂದಿರ, ಉದ್ಯಾನ, ವಿದ್ಯುತ್ ಪರಿವರ್ತಕಗಳಿಗೆ ಸಂಬಂಧಿಸಿದ ಅಧಿಕಾರಿಗಳ ಕಚೇರಿಗೆ ಒಟ್ಟಾಗಿ ಹೋಗಿ, ಘೋಷಣಾ ಫಲಕ ಹಿಡಿದು ನಿಂತು ಅಹಿಂಸಾತ್ಮಕ ಮೌನ ಪ್ರತಿಭಟನೆ ಮಾಡುತ್ತೇವೆ. ಆ ಚಿತ್ರವನ್ನು ಸೋಶಿಯಲ್ ಮೀಡಿಯಾದಲ್ಲಿ ಹಾಕುತ್ತೇನೆ.

6. ವಿಶೇಷ ಪೂರ್ವಸಿದ್ಧತೆ ಇಲ್ಲದೆಯೂ ಸಮೀಪದ ಯಾವುದಾದರೂ ಒಂದು ಹೊಲಕ್ಕೆ/ ತೋಟಕ್ಕೆ ಹೋಗಿ, ರೈತರ ಕುಶಲೋಪರಿ ವಿಚಾರಿಸಿ ಮೂರು ಗಂಟೆ ಶ್ರಮದಾನ ಮಾಡಿ ಬರುತ್ತೇವೆ. ಅಥವಾ ಅನಾಥಾಶ್ರಮಕ್ಕೆ ಅಥವಾ ವೃದ್ಧಾಶ್ರಮಕ್ಕೆ ಭೇಟಿ ನೀಡಿ ಬರುತ್ತೇವೆ. ನಾವು ಇಬ್ಬರೇ ಇದ್ದರೂ ಸರಿ, ಒಬ್ಬನೇ ಆದರೂ ಸರಿ.

ಇನ್ನೂ ತುಸು ರೋಚಕವಾದ ಶಾಂತಿಯುತ ಕ್ರಮ ಕೈಗೊಳ್ಳಬೇಕೆ? ಮಾಸ್ಕ್ ಮತ್ತು ಕೈಗವಸು ಧರಿಸಿ ಈ ಈ ತಾಣಗಳ ವಿಡಿಯೊ ರೆಕಾರ್ಡಿಂಗ್ ಮಾಡಲು ವರ್ಷಕ್ಕೆ ಎರಡು ಬಾರಿ ಗುಂಪಿನೊಂದಿಗೆ ಹೊರಡುತ್ತೇನೆ.



### ಸಂಭ್ರಮಿಸಲಿ ಸಿನಿಮಾ

ಬರಲಿರುವ ಹೊಸ ವರ್ಷದಲ್ಲಿ ಕನ್ನಡ ಸಿನಿಮಾಕ್ಕೆ ಪ್ರಾಶಸ್ತ್ಯ ಸಿಗಬೇಕು. ಜನ ಸಿನಿಮಾ ಮಂದಿರಕ್ಕೆ ಬರುವಂತೆ ಆಗಬೇಕು. ಒಟಿಟಿಯಂತಹ ಪ್ಲಾಟ್‌ಫಾರಂನಲ್ಲಿಯೂ ಕನ್ನಡದ ಮಾರುಕಟ್ಟೆ ವಿಸ್ತಾರವಾಗಬೇಕು. ಕನ್ನಡಿಗರಿಗೆ ಉದ್ಯೋಗ ಎಲ್ಲ ರಂಗದಲ್ಲಿ ಸಿಗುವಂತೆ ಆಗಬೇಕು. ಊರು ಕೇರಿಗಳಲ್ಲಿ ಜಗಳಗಳು ನಿಂತು ಸೌಹಾರ್ದಯುತ ಹಬ್ಬಗಳನ್ನು ಸಂಭ್ರಮಿಸುವಂತೆ ಆಗಲಿ. ಸಮುದಾಯ ಮತ್ತು ವೈಯಕ್ತಿಕವಾಗಿ ಆರೋಗ್ಯದ ಬಗ್ಗೆ ಹೆಚ್ಚು ಗಮನ ಕೊಡಬೇಕಿದೆ. ಹೊಸ ಹೊಸ ಕಾಯಿಲೆಗಳು ಬರುವ ಸಂದರ್ಭದಲ್ಲಿ ಶಿಸ್ತಿನ ಜೀವನವನ್ನು ರೂಪಿಸಬೇಕು. ಹೊಸ ನಾಟಕವನ್ನು ಕೊಡುವ ಯೋಚನೆ ನನಗಿದೆ.

**-ಗಿರಿರಾಜ್ ಬಿ.ಎಂ.,**
ಸಿನಿಮಾ ನಿರ್ದೇಶಕ



### ಬೇಕಿದೆ ಸ್ಪೋರ್ಟ್ಸ್ ಹಬ್

ಒಡಿಶಾದ ಭುವನೇಶ್ವರದಲ್ಲಿ ದೊಡ್ಡ ಸ್ಪೋರ್ಟ್ಸ್ ಹಬ್ ಇದೆ. ಅದರಿಂದಾಗಿಯೇ ಹೆಚ್ಚಿನ ಸಂಖ್ಯೆಯಲ್ಲಿ ಆಟಗಾರರು ಪಾಲ್ಗೊಳ್ಳುತ್ತಿದ್ದಾರೆ. ಅಂತಹ ಸೌಕರ್ಯಗಳು ರಾಜ್ಯಕ್ಕೂ ಬೇಕಿವೆ. ಸೌಕರ್ಯಗಳು ಇನ್ನಷ್ಟು ಹೆಚ್ಚಾಗಬೇಕು. ಹೊಸ ಹೊಸ ಮೈದಾನಗಳು ನಿರ್ಮಾಣವಾಗಬೇಕು. ಕ್ರೀಡಾಕ್ಷೇತ್ರದ ಗ್ರಾಸ್‌ರೂಟ್ ಗಟ್ಟಿಯಾಗಬೇಕು. ಕಾಲಕ್ಕೆ ತಕ್ಕಂತೆ ಆಟಗಾರರು, ಕೋಚ್‌ಗಳು, ಕ್ರೀಡಾ ಪ್ರಾಧಿಕಾರಗಳು, ಕ್ಲಬ್‌ಗಳು, ಕ್ರೀಡಾ ಇಲಾಖೆಯು ಅಪ್‌ಡೇಟ್ ಆಗಬೇಕು. ಕ್ರೀಡಾಪಟುಗಳ ಬೆನ್ನಿಗೆ ಇಡೀ ವ್ಯವಸ್ಥೆ ನಿಲ್ಲಬೇಕಿದೆ. ಇದು ಸಾಧ್ಯವಾದಾಗ ಪ್ರತಿಭೆಗಳಿಗೆ ಕ್ರೀಡೆಯ ಮೇಲೆ ನಂಬಿಕೆ ಹುಟ್ಟುತ್ತದೆ. ಇನ್ನಷ್ಟು ಪ್ರತಿಭಾನ್ವಿತ ಆಟಗಾರರು ಬೆಳಕಿಗೆ ಬರುತ್ತಾರೆ.

**–ಎಸ್‌.ವಿ. ಸುನೀಲ್,**
**ಅಂತರರಾಷ್ಟ್ರೀಯ ಹಾಕಿ ಆಟಗಾರ**

### ಆರೋಗ್ಯದ ವರ್ಷವಾಗಲಿ



ಕೃತಕ ಬುದ್ಧಿಮತ್ತೆ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ಬಳಸಿ ಚಿಕಿತ್ಸೆ ನೀಡುವುದು ಆರೋಗ್ಯ ಕ್ಷೇತ್ರದಲ್ಲಾದ ಹೊಸ ಬೆಳವಣಿಗೆ. ಇದನ್ನು ಇನ್ನೂ ಹೆಚ್ಚು ಹೆಚ್ಚು ಬಳಸುವಂತಾಗಬೇಕು. ಅತ್ಯಾಧುನಿಕ ತಂತ್ರಜ್ಞಾನ ಬಳಸಿ 'ಪರ್ಸನಲೈಸ್ಡ್ ಟ್ರೀಟ್‌ಮೆಂಟ್' ಸಿಗಬೇಕು. ಈಗೀಗ ಜೆನೆಟಿಕ್ ಮೇಕಪ್ ಬಳಕೆಯಾಗುತ್ತಿದೆ. ಎಲ್ಲರ ದೇಹಪ್ರಕೃತಿ ಒಂದೇ ತರಹ ಇರಲ್ಲ. ಒಂದು ಮಾತ್ರೆ ರೋಗಿಗೆ ಕೊಟ್ಟರೆ ಅದು ಆತನ ದೇಹದಲ್ಲಿ ಯಾವ ರೀತಿ ಪರಿಣಾಮ ಬೀರುತ್ತದೆ ಎಂಬುದನ್ನು ಅಧ್ಯಯನ ಮಾಡಬೇಕು. ಇದೂ ಮುಂದಿನ ದಿನಗಳಲ್ಲಿ ಆಗಬೇಕಾದದ್ದು. ಜನರಿಗೆ ಕೈಗೆಟಕುವ ದರದಲ್ಲಿ ಔಷಧ, ಚಿಕಿತ್ಸೆ ಸಿಗುವಂತಾಗಬೇಕು. ಇದು ಹೊಸ ವರ್ಷದಿಂದಲೇ ಆಗಬೇಕು. ಯಾರಿಗೆ ಯಾವ ಕಾಯಿಲೆ ಬಂದರೂ ಸುಲಭದಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಬೇಕು. '2024 ಎಲ್ಲರಿಗೂ ಆರೋಗ್ಯ ವರ್ಷ'ವಾಗಿರಲಿ.

**-ಡಾ. ಶಾಂತಲಾ,**
ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ, ಬೆಂಗಳೂರು

### ಸರ್ವೋದಯವಾಗಲಿ ಸರ್ವರಲಿ



ವರ್ಷ ಅಂತ ಅಲ್ಲ, ಪ್ರತಿ ಕ್ಷಣವೂ ಎಲ್ಲರಿಗೂ ಒಳ್ಳೆಯದಾಗಬೇಕು. ಪರಸ್ಪರರು ಪ್ರೀತಿಸುವುದನ್ನು ಕಲಿಯಬೇಕು. ನಾವು ಬಾಯಿಗಿಂತ ಕಿವಿಯನ್ನು ಹೆಚ್ಚು ಬಳಸುವುದನ್ನು ಕಲಿಯಬೇಕು. ತಾಳ್ಮೆ, ಸಹನೆ ಎಲ್ಲರಲ್ಲೂ ವೃದ್ಧಿಯಾಗುವಂತೆ ಆಗಲಿ. ಹಳೆಯ ತಲೆಮಾರಿನ ಅನಕ್ಷರಸ್ಥರಿಂದ ಬದುಕಿನ ಪಾಠವನ್ನು ಕಲಿಯಬೇಕಿದೆ. ವಿದ್ಯಾವಂತರು ಎನ್ನುವವರಲ್ಲಿ ಹೆಚ್ಚು ಅಕ್ಷರಸ್ಥರಾಗಿ ಮಾತ್ರ ಇದ್ದಾರೆ. ಸಮಾಜದ ಎಲ್ಲ ವರ್ಗದ ಜನರು ಪರಸ್ಪರ ಕೈ ಹಿಡಿದು ಮುನ್ನಡೆಯಬೇಕು. ದೇಶವನ್ನು ಕಟ್ಟುವ ಆಶಯವನ್ನು ಎಲ್ಲರು ಹೊಂದಿರಬೇಕು. ಈ ಮಣ್ಣಿನ ಪ್ರತಿಯೊಬ್ಬರೂ ಮುಖ್ಯ, ಅವರಿಗೂ ಬದುಕಿದೆ. ಅವರ ಕನಸುಗಳನ್ನು ಗೌರವಿಸಬೇಕು. ಎಲ್ಲರ ಬದುಕು ಹಸನಾಗಬೇಕು.

**-ಬಾದಲ್ ನಂಜುಂಡಸ್ವಾಮಿ,** ಚಿತ್ರಕಲಾವಿದ